2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಕೊಡಗು, ಮಡಿಕೇರಿ (ಕಾರ್ಯ ನಿರ್ವಹಣೆ ವೀರಾಜಪೇಟೆ).
ಎಸ್.ಸಿ. ಸಂಖೆಃ 5010/2022

ಪ್ರಾ.ಸಾ ಃ 3

ಚಾಸಾ ಃ 4

ಸಾಕ್ಷಿಯ ಹೆಸರು ಃ ಸುಜಿತ್

ತಂದೆಯ ಹೆಸರುಃ ಮನೋಹರ್

ವಯಸ್ಸು ಃ 38 ವರ್ಷ

ವೃತ್ತಿ ಃ ವ್ಯಾಪಾರ

ವಿಳಾಸ ಃ ಇರಟ್ಟಿ, ಕೇರಳ ರಾಜ್ಯ

ದಿಃ 16.11.2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

(ಸಾಕ್ಷಿಗೆ ಮಲೆಯಾಳಂ ಭಾಷೆ ಗೊತ್ತಿದ್ದು ಕನ್ನಡ ಭಾಷೆ ಬರದೇ ಇದ್ದ ಕಾರಣ ಮಲೆಯಾಳಂ ಭಾಷೆ ಗೊತ್ತಿದ್ದ ಶ್ರೀಯುತ ಸಿಡಿಕೆ ವಕೀಲರನ್ನು ಭಾಷಾಂತರಕಾರನ್ನಾಗಿ ನೇಮಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

1. ನನಗೆ ಚಾಸಾ 3 ರವರ ಪರಿಚಯ ಇದೆ. ನನಗೆ ಚಾಸಾ 2 ರವರ ಪರಿಚಯ ಇಲ್ಲ. ನನಗೆ ನ್ಯಾಯಾಲಯದ ಮುಂದಿರುವ ಆರೋಪಿಗಳ ಪರಿಚಯ ಇಲ್ಲ. 2 ವರ್ಷಗಳ ಹಿಂದೆ ನಾನು ಹಾಗೂ ಚಾಸಾ 4 ರವರು ಕೊಡಗಿಗೆ ಪ್ರವಾಸಕ್ಕೆ ಬಂದಿದ್ದು ಯಾವುದೋ ಒಂದು ಹೋಮ್ ಸ್ಟೇ ಯಲ್ಲಿ ತಂಗಿದ್ದೆವು. ಆ ಹೋಮ್ ಸ್ಟೇಯ ಹೆಸರು ಗೊತ್ತಿಲ್ಲ. ಆ ಹೋಮ್ ಸ್ಟೇ ಮಾಲೀಕರ ಹೆಸರು ನನಗ ಗೊತ್ತಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ನಾವು ತಂಗಿದ್ದ ಹೋಮ್ ಸ್ಟೇಗೆ ಯಾವ ಮಹಿಳೆಯು ಬಂದಿರಲ್ಲಿ. ನಾನು ಮದ್ಯ

ಸೇವಿಸಿರಲಿಲ್ಲ. ನಾನು ಮತ್ತು ಚಾಸಾ 3 ಯಾವುದೇ ಮಹಿಳೆಯ ಜೊತೆ ಹೋಮ್ ಸ್ಟೇ ಯಲ್ಲಿ ಲೈಂಗಿಕ ಸಂಪರ್ಕ ಮಾಡಿರುವುದಿಲ್ಲ. ಪೊಲೀಸರು ನಾನು ತಂಗಿದ್ದ ಹೋಮ್ ಸ್ಟೇ ಗೆ ದಾಳಿ ಮಾಡಿಲ್ಲ ಹಾಗೂ ನಮ್ಮಿಂದ ಹಣವನ್ನು ಹಾಗೂ ಬೇರೆ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ. ನಾನು ಪೊಲೀಸರ ಸಮಕ್ಷಮ ಯಾವುದೇ ಹೇಳಿಕೆ ನೀಡಿಲ್ಲ. ನ್ಯಾಯಾಲಯದ ಮುಂದೆ ಹೇಳಿಕೆ ನೀಡಿದ್ದೆ. ನಾನು ಏನು ಹೇಳಿದ್ದೆ ಎಂದು ಈಗ ನೆನಪಿಗೆ ಬರುತ್ತಿಲ್ಲ. ಈಗ ತೋರಿಸಿದ ಹೇಳಿಕೆಯಲ್ಲಿ ನನ್ನ ಸಹಿ ಇದೆ. ಸದರಿ ಹೇಳಿಕೆಯನ್ನು ನಿಪಿ 7 ಎಂದು ಸಾಕ್ಷಿಯ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಪೊಲೀಸರು ಯಾವುದೇ ಮಹಜರನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಹಾಗೂ ಹಣವನ್ನು ಜಪ್ತು ಮಾಡಿರುವುದಿಲ್ಲ. ಈಗ ತೋರಿಸಿದ ಮಹಜರಿನಲ್ಲಿ ನನ್ನ ಸಹಿ ಇದೆ. ಸದರಿ ಮಹಜರನ್ನು ಈಗಾಗಲೇ ನಿಪಿ 2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಗಿಯಿತು. ನಿಪಿ 2 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿಲ್ಲ. ನಿಪಿ 2 ರ ಮೇಲೆ ಪೊಲೀಸರ ಕೋರಿಕೆಯ ಮೇರೆಗೆ ಈಗ್ಗೆ 2 ವರ್ಷಗಳ ಹಿಂದೆ ಸಹಿ ಮಾಡಿರುತ್ತೇನೆ, ಎಲ್ಲಿ ಎಂದು ಈಗ ನನಗೆ ನೆನಪಿಗೆ ಬರುತ್ತಿಲ್ಲ. ಈಗ ತೋರಿಸಿದ ಛಾಯಾಚಿತ್ರದಲ್ಲಿ ನಾನು ಕಾಣಿಸುತ್ತಿದ್ದೇನೆ. ಸದರಿ ಛಾಯಾಚಿತ್ರವನ್ನು ಈಗಾಗಲೇ ನಿಪಿ 3 ಗುರುತಿಸಲಾಗಿದೆ. ನಿಪಿ 3 ರಲ್ಲಿ ಕಾಣಿಸುವ ಬೇರೆ ವ್ಯಕ್ತಿಯ ಪರಿಚಯ ನನಗೆ ಇಲ್ಲ. ನಿಪಿ 3 ನ್ನು ಎಲ್ಲಿ ಹಾಗೂ ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಪಿ ಪಿ ಯವರು ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

2. ದಿಃ 09.01.2021 ರಂದು ನಾನು ಹಾಗೂ ಚಾಸಾ 3 ರವರು ವಿರಾಜಪೇಟೆಗೆ ಬಂದಿದ್ದು ಆರ್ಜಿ ಗ್ರಾಮದಲ್ಲಿರುವ 1 ನೇ ಆರೋಪಿಯವರ ಹೋಮ್ ಸ್ಟೇ ಯಲ್ಲಿ ಉಳಿದುಕೊಂಡಿದ್ದೆವು ಎಂದರೆ ಸರಿಯಲ್ಲ. ದಿಃ 09.01.2021 ರಂದು ನಾನು ಹಾಗೂ ಚಾಸಾ 3 ರವರು ವಿರಾಜಪೇಟೆಗೆ ಹೋಗುವ ಎಂದು ಹೇಳಿ 1 ನೇ ಆರೋಪಿಯನ್ನು ಸಂಪರ್ಕಿಸಿ ಮಾತನಾಡಿದಾಗ ಆತ ನಮ್ಮೊಂದಿಗೆ ಮಾತನಾಡುತ್ತಾ ನಿಮಗೆ ಹೆಂಗಸರ ಅವಶ್ಯಕತೆ ಇದೆಯೇ ಎಂದು ಕೇಳಿ ಒಬ್ಬ ಹೆಂಗಸು ಇದ್ದಾಳೆ, 5000 ಆಗುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾವು ಅದಕ್ಕೆ ಒಪ್ಪಿದ್ದು ಮದ್ಯಾಹ್ನ 2 ಗಂಟೆಗೆ 1 ನೇ ಆರೋಪಿಯ ಹೋಮ್ ಸ್ಟೇಗೆ ಬಂದಿದ್ದು ಮುಂಗಡವಾಗಿ 8000 ಹಣ ನೀಡಿ ಉಳಿದ 2000 ಹಣವನ್ನು ನೀಡುವುದಾಗಿ ತಿಳಿಸಿರುತ್ತೇವೆ ಎಂದರೆ ಸರಿಯಲ್ಲ. ಸ್ವಲ್ಪ ಸಮಯದ ನಂತರ ಚಾಸಾ 2 ರವರನ್ನು ನಮ್ಮ ರೂಮಿಗೆ ಕಳುಹಿಸಿಕೊಟ್ಟಿದ್ದು ನಾವು ಆಕೆಯ ಜೊತೆ ಮಾತನಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ 2 ರವರು ಆರೋಪಿ ಹಾಗೂ ಆಕೆಯ ಪತ್ನಿ 2 ನೇ ಆರೋಪಿ ನಿಮ್ಮೊಂದಿಗೆ ದೈಹಿಕ ಸಂಪರ್ಕ ನಡೆಸಲು 4000 ಹಣ ಹಾಗೂ ಕಾಂಡೋಮ್ ನೊಂದಿಗೆ ನಿಮ್ಮ ರೂಮಿಗೆ ಕಳುಹಿಸಿರುತ್ತಾರೆ ನಾವು, 3 ನೇ ಆರೋಪಿಯವರ ಮುಖಾಂತರ ಅವರ

ಆಟೋದಲ್ಲಿ ಇಲ್ಲಿಗೆ ಬಂದಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೇ ಸರಿಯಲ್ಲ. ನಾನು ಹಾಗೂ ಚಾಸಾ 3 ರವರು ಚಾಸಾ 2 ರವರೊಂದಿಗೆ ಕಾಂಡೋಮ್ ಬಳಸಿ ದೈಹಿಕ ಸಂಪರ್ಕ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ಮೂವರೂ ರೂಮಿನಲ್ಲಿ ಅರೆ ಬರೆ ಬಟ್ಟೆಯಲ್ಲಿ ಇದ್ದಾಗ ಸಂಜೆ 4.00 ಗಂಟೆಯ ವೇಳೆಗೆ ಯಾರೋ ಬಂದು ಬಾಗಿಲು ಬಡಿದಿದ್ದು ನಾನು ಬಾಗಿಲು ತೆರೆದಿರುತ್ತೇನೆ ಎಂದರೆ ಸರಿಯಲ್ಲ. ಮಹಿಳಾ ಪೊಲೀಸರು ಚಾಸಾ 2 ರವರು ಬಟ್ಟೆ ಸರಿ ಮಾಡಿಕೊಳ್ಳುವಂತೆ ಹೇಳಿ ನಂತರ ನಮ್ಮನ್ನು ವಿಚಾರಿಸಿದ್ದು 1 ನೇ ಆರೋಪಿ ಕೊಟ್ಟಿದ್ದ 4 ಸಾವಿರ ರೂ ಹಣವನ್ನು ಚಾಸಾ 2 ರವರು ದಿಂಬಿನ ಕೆಳಗೆ ಇಟ್ಟಿದ್ದನ್ನು ಹಾಗೂ ಸೆಕ್ಸ್ ಮಾಡಲು ಬಳಸಿದ ಕಾಂಡೋಮ್ ಗಳನ್ನು ಚಾಸಾ 5 ಹಾಗೂ 6 ರವರ ಸಮಕ್ಷಮ ಪೊಲೀಸರು ಜಪ್ತು ಮಾಡಿ ನಿಪಿ 2 ರಂತೆ ಸಂಜೆ 4.30 ರಿಂದ 6.30 ಗಂಟೆಯವರೆಗೆ ಬರವಣಿಗೆ ಮಾಡಿ ಓದಿ ಹೇಳಿ ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 2 ಮಹಜರು ಮಾಡುವ ಸಮಯದಲ್ಲಿ ನಿಪಿ 3 ರಂತೆ ಛಾಯಾಚಿತ್ರ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

3. ನಂತರ ಪೊಲೀಸರು ನನ್ನನ್ನು, ಚಾಸಾ 2, ಚಾಸಾ 3, 2 ಹಾಗೂ 3 ನೇ ಆರೋಪಿಗಳನ್ನು ಹಾಗೂ ಸ್ವತ್ತು ಹಾಗೂ ಹಣದೊಂದಿಗೆ ವಿರಾಜಪೇಟೆ ಪೊ. ಠಾಣೆಗೆ ಕರೆದುಕೊಂಡು ಬಂದಿದ್ದು 1 ನೇ ಆರೋಪಿ ಸ್ಥಳದಿಂದ ಓಡಿ ಹೋದ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ.

ನಮ್ಮ ರೂಮಿಗೆ ಚಾಸಾ 2 ರವರನ್ನು 1 ಹಾಗೂ 2 ನೇ ಆರೋಪಿ ಕಳುಹಿಸಿಕೊಟ್ಟಿದ್ದರಿಂದ ನಾವು ಚಾಸಾ 2 ರವರ ಒಪ್ಪಿಗೆಯ ಮೇರೆಗೆ ಆಕೆಯೊಂದಿಗೆ ದೈಹಿಕ ಸಂಪರ್ಕ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಸಮಕ್ಷಮ ದಿಃ 11.01.2021 ರಂದು ನನಗೆ ಈಗ ಓದಿ ಹೇಳಿದಂತೆ " ನಾನು ---------- ಕೊಟ್ಟ ಹೇಳಿಕೆ " ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ನಿಪಿ 8 ಎಂದು ಗುರುತಿಸಲಾಯಿತು. ನಾನು ನ್ಯಾಯಾಧೀಶರ ಸಮಕ್ಷಮ ಸಂಜೆ 4 ಗಂಟೆಗೆ ಒಬ್ಬ ಹೆಂಗಸನ್ನು ಆಟೋ ರಿಕ್ಷಾದಲ್ಲಿ 1 ನೇ ಆರೋಪಿ ಕರೆದ್ದರು ಹಾಗೂ ನಾನು, ಚಾಸಾ 3 ಹಾಗೂ ಆ ಮಹಿಳೆ ಒಂದೇ ಕೋಣೆಯಲ್ಲಿ ಇದ್ದೆವು, ಆ ಸಮಯದಲ್ಲಿ ಪೊಲೀಸರು ಸ್ಥಳಕ್ಕೆ ಬಂದು ನಮ್ಮನ್ನು ಠಾಣೆಗೆ ಕರೆದುಕೊಂಡು ಹೋದರು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸಾಕ್ಷಿ ನುಡಿಯುತ್ತಾರೆ ನನಗೆ ಈಗ ನೆನಪಿಗೆ ಬರುತ್ತಿಲ್ಲ. ನಿಪಿ 7, 2 ಮತ್ತು 8 ರಲ್ಲಿರುವ ಎಲ್ಲ ವಿಚಾರಗಳು ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓಹೇಕೇ ಸರಿ ಇದೆ

Sd/-xxx

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಡಗು-ಮಡಿಕೇರಿ (ಕಾರ್ಯ ನಿರ್ವಹಣೆ ವಿರಾಜಪೇಟೆ)